ಪ್ರದೇಶದಲ್ಲಿಯೇ ಎಷ್ಟೊಂದು ಭಾಷೆಗಳಿವೆ. ಸಂತಾಲಿಯಲ್ಲದೆ, ಹೊ, ಮುಂಡಾ, ನಾಗ್ ಪುರಿ ಭಾಷೆಗಳನ್ನು ಬಲ್ಲೆ. ನನಗೆ ಹೊರಗಿನ ಭಾಷೆಗಳ ಆಗುಹೋಗುಗಳು, ತಕ್ಕಮಟ್ಟಿಗಿನ ವಿಚಾರಗಳು, ಹಿಂದಿಯ ಮೂಲಕ ಗೊತ್ತಾಗುತ್ತವೆ.

8 ಜಾರ್ಖಂಡ್‌ನಲ್ಲಿ ಕೃಷಿಯೇ ಜೀವನಾಧಾರ. ಇಲ್ಲಿ ಶಿಕ್ಷಣ ಎನ್ನುವುದು ಉಳ್ಳವರ ಸೊತ್ತಾಗಿದೆ. ಇಡೀ ಸಮಾಜವು ಶಿಕ್ಷಿತರು ಮತ್ತು ಅಶಿಕ್ಷಿತರು ಎಂಬ ಎರಡು ವಿಭಾಗವಾಗಿದೆ. ಶಿಕ್ಷಿತರು ತಮಗೆ ಲಭ್ಯವಿರುವ ಅವಕಾಶಗಳನ್ನು ಬಳಸಿಕೊಂಡು ಮುಂದೆ ಮುಂದೆ ಸಾಗುತ್ತಾ ಹೋಗುತ್ತಿದ್ದಾರೆ. ಆರ್ಥಿಕ ತೊಡಕುಗಳಿಂದ ಅಥವಾ ಬೇರೆ ಯಾವುದೋ ಸಮಸ್ಯೆಯಿಂದಾಗಿ ಶಿಕ್ಷಣ ಪಡೆಯಲಾಗದವರು ಸಂಪಾದನೆಗಾಗಿ ವೃತ್ತಿಯನ್ನು ಅರಸುತ್ತಾ ತಮ್ಮ ಹುಟ್ಟೂರು ತ್ಯಜಿಸಿ ಮುಂದು ಮುಂದೆ ಸಾಗುತ್ತಾ ಹೋಗುತ್ತಾರೆ. ರಾಜ್ಯದಿಂದ ಹೊರಗೆ ಹೋಗುವ ಅವರಲ್ಲಿ ಕೆಲವರು ಊರಿನಲ್ಲಿರುವ ತಮ್ಮ ಕುಟುಂಬವನ್ನು ಪೋಷಿಸುತ್ತಾರೆ. ಮತ್ತೆ ಕೆಲವರು, ಆರಂಭದಲ್ಲಿ ಮನೆಯವರನ್ನು ನೆನಪಿಸಿಕೊಳ್ಳುತ್ತಾರೆ, ಅವರಿಗೂ ಏನಾದರೂ ಸಹಾಯ ಮಾಡುತ್ತಾರೆ. ಆ ಬಳಿಕ ತಮ್ಮ ಬದುಕನ್ನು ಕಟ್ಟಿಕೊಂಡು ಹುಟ್ಟೂರನ್ನು ಮರೆತುಬಿಡುತ್ತಾರೆ. ಊರಿನ ಪರಿಸ್ಥಿತಿ ಹಾಗೆಯೇ ಉಳಿದುಬಿಡುತ್ತದೆ. ಈ ಅಗಾಧವಾದ ಅಂತರವನ್ನು ಸರಿಪಡಿಸಬೇಕಾದರೆ ಶಿಕ್ಷಿತರು, ಅವಕಾಶಗಳನ್ನು ಅರಸುತ್ತ ಮುಂದಕ್ಕಷ್ಟೇ ಸಾಗದೇ, ತಮ್ಮವರನ್ನೂ ಜೊತೆಗೆ ಕರೆದೊಯ್ಯುವ ತಾಳ್ಮೆ ತೋರಬೇಕು. ಒಂದಿಷ್ಟು ಹಿಂತಿರುಗಿ ನೋಡಿ ಇಲ್ಲಿನ ಜನರಿಗೆ ಶಿಕ್ಷಣ ದೊರಕುವಂತೆ ಮಾಡಬೇಕು.

ಸಮುದಾಯವು ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಆ ಸಂಗತಿಗಳನ್ನು ನನ್ನ ಸಮಕಾಲೀನರು ತಮ್ಮ ಬರಹಗಳಲ್ಲಿ, ಕವಿತೆ , ಉಪನ್ಯಾಸಗಳಲ್ಲಿ ವಸ್ತುವಾಗಿ ಬಳಸಿಕೊಂಡಿದ್ದಾರೆ. ರಾಣಿ ಮುರ್ಮು, ಸಾರೋ ಹನ್ಸ್‌ದಾ, ಶಾಮ್ ಸೀ ಟುಡು, ಖೇತನ್ ಸುರೇನ್ ಮುಂತಾದವರು ನನ್ನ ಸಮಕಾಲೀನ ಬರಹಗಾರರು ಇವನ್ನೆಲ್ಲ ಬರೆಯುತ್ತಿದ್ದಾರೆ.

●

# ಓದುವ ಎಲ್ಲವೂ ಸಾಹಿತ್ಯವೇ

## ಸೋನಿಯಾ ಕುಂದ್ರಕ್‌ಪಮ್

### ಮಣಿಪುರಿ

1 ನನ್ನ ಪಾಲಿಗೆ ನಾವು ಓದುವ ಎಲ್ಲವೂ ಸಾಹಿತ್ಯವೇ. ಕಾದಂಬರಿ, ಸಣ್ಣಕಥೆ, ಕವಿತೆ – ಅಷ್ಟೇ ಏಕೆ ಚಿತ್ರಕಥೆಯೂ ಅಭಿವ್ಯಕ್ತಿಯ ಒಂದು ಮಾಧ್ಯಮವೆಂದು ಪರಿಗಣಿಸುವೆ.

2 ನಾನು ಹೆಣ್ಣು ಎನ್ನುವುದಕ್ಕೂ ನನ್ನ ಬರವಣಿಗೆಗೂ ಖಂಡಿತಾ ಸಂಬಂಧವಿದೆ. ಮಹಿಳೆಯರು ಸಮಾಜದ ಕುರಿತು ವಿಮರ್ಶಾತ್ಮಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅರ್ಹರೇ ಆಗಿದ್ದಾರೆ. ನಾನು ನನ್ನ ಕಾದಂಬರಿಗಳ ಮೂಲಕ ನನ್ನ ವಿಚಾರಗಳನ್ನು ಹೇಳಬಯಸುತ್ತೇನೆ.

3 ಸಾಹಿತ್ಯ ಕ್ಷೇತ್ರಕ್ಕೆ ಈಗಷ್ಟೇ ಪ್ರವೇಶಪಡೆಯುತ್ತಿರುವ ನಾನು ಅಂತಹ ಸವಾಲುಗಳನ್ನೇನೂ ಎದುರಿಸಿಲ್ಲ. ನನ್ನ ವಾರಿಗೆಯ ಬರಹಗಾರರ ಜೊತೆಗೆ ನಾನು ಕೂಡ ನಮ್ಮ ಸಂಪ್ರದಾಯ, ಸಂಸ್ಕೃತಿ ಮತ್ತು